

ಎಂಬುದನ್ನು ಅರಿಯದ ಜನ ಮೊದಲು ಓಡುವುದು 'ದೆವ್ವ ಬಿಡಿಸುವ' ಸ್ಥಳಗಳಿಗೆ! ಸಮಸ್ಯೆಯೆಂದರೆ ಇದರಿಂದ ರೋಗಿ ಚಿಕಿತ್ಸೆ ಪಡೆಯುವುದು ಮತ್ತಷ್ಟು ತಡವಾಗುತ್ತದೆ.

### ಭ್ರಮೆಯೇ ಕಾಯಿಲೆಯಾದಾಗ…

ಕೆಲವೊಮ್ಮೆ 'ಭ್ರಮೆ'ಯೇ ಮುಖ್ಯ ಲಕ್ಷಣವಾಗಿ 'ಭ್ರಮೆಯೇ ಕಾಯಿಲೆ' ಎಂಬ ಪರಿಸ್ಥಿತಿ ಬರಬಹುದು. ಅದನ್ನು 'ಭ್ರಮಾಧೀನ ಕಾಯಿಲೆ' **delusional disorder** ಎಂದು ಮನೋವೈದ್ಯಕೀಯ ವಿಜ್ಞಾನ ಗುರುತಿಸುತ್ತದೆ. ಇಲ್ಲಿ ವ್ಯಕ್ತಿ ತನ್ನ ನಂಬಿಕೆಯನ್ನು ಎಷ್ಟು ಬಲವಾಗಿ ಹಿಡಿದಿರುತ್ತಾನೆಂದರೆ, ಅದರ ಸುತ್ತ ಒಂದು ಭ್ರಮೆಯ ಜಗತ್ತೇ ನಿರ್ಮಾಣಗೊಳ್ಳುತ್ತದೆ. ಇದನ್ನು**Psuedo community delusional disorder** 'ಸುಳ್ಳು ಸಮಾಜ' ಎಂದೇ ಕರೆಯಲಾಗುತ್ತದೆ. ಒಬ್ಬ ಮಹಿಳೆಗೆ ತನ್ನ ಗಂಡನ ಶೀಲದ ಬಗ್ಗೆ ಸಂದೇಹದ ಭ್ರಮೆಯಿದೆ ಎಂದುಕೊಂಡರೆ, ಆ 'ಭ್ರಮೆ'ಗೆ ಅನುಗುಣವಾಗಿ ಆಕೆಯ ಮಿದುಳು ಕಲ್ಪನೆಯ ಒಂದು ಸರಣಿಯನ್ನೇ ಹೆಣೆಯುತ್ತದೆ. ಈ ವ್ಯಕ್ತಿಗಳಲ್ಲಿ ಇತರ ಕಾಯಿಲೆಗಳಂತೆ ನಡವಳಿಕೆಯ ವೈಪರೀತ್ಯಗಳಾಗಲೀ, ಇತರ ಸಮಸ್ಯೆಗಳಾಗಲೀ ಇರಬೇಕೆಂದಿಲ್ಲ. ಪತಿ/ಪತ್ನಿಯನ್ನು ಹೊರತುಪಡಿಸಿ ಇತರರಿಗೆ ಅವರಿಗಿರಬಹುದಾದ ಸಮಸ್ಯೆಯ ಯಾವ ಸುಳಿವೂ ಇರಲಾರದು.

ಪತಿ ಅಥವಾ ಪತ್ನಿಯ ಶೀಲದ ಬಗೆಗಿನ ಸಂಶಯ ಭ್ರಮೆಯ ದಾರಿ ಹಿಡಿಯಲು ಮಿದುಳಿನಲ್ಲಿರುವ ಹಲವು ಸಮಸ್ಯೆಗಳು ಕಾರಣವಾಗಬಹುದು. ಮದ್ಯವ್ಯಸನದಿಂದ ಉಂಟಾಗುವ 'ಒಥೆಲೋ ಸಿಂಡ್ರೋಮ್' (ಶೇಕ್ಸ್‌ಪಿಯರ್‌ನ 'ಒಥೆಲೋ' ನಾಟಕದ ನಾಯಕನಿಗಿರುವ ಪತ್ನಿಯ ಶೀಲದ ಬಗೆಗಿನ ಸಂದೇಹದಿಂದ ಬಂದ ಹೆಸರು) ಮದ್ಯ ವ್ಯಸನಿಗಳಲ್ಲಿ ನಾವು ನೋಡಬಹುದಾದ ಅತಿ ಸಾಮಾನ್ಯ ಸಮಸ್ಯೆ. ಹಾಗೆಯೇ ಮಹಿಳೆಯರಲ್ಲಿ ಸಮಾಜ ಬಹುವಾಗಿ ಬೆಲೆ ನೀಡುವ ದೈಹಿಕ ಸೌಂದರ್ಯ, ಯೌವನ, ತೆಳ್ಳಗಿರುವುದು ಬೆಳ್ಳಗಿರುವುದು ಇವು ವಯಸ್ಸು ಹೆಚ್ಚಿದಂತೆ ಸಹಜವಾಗಿ ಕುಂದುತ್ತವೆಯಷ್ಟೆ. ಹಾಗೆ ಕುಂದುವುದರ ಜೊತೆಗೆ, ಋತುಬಂಧ (ಮುಟ್ಟು ನಿಲ್ಲುವುದು) ದೊಂದಿಗೆ 'ಇಸ್ಟ್ರೋಜೆನ್' ಎಂಬ ಹಾರ್ಮೋನು ಕಡಿಮೆಯಾಗುತ್ತದೆ. ಇವೆಲ್ಲದರ ಒಟ್ಟು ಪರಿಣಾಮ ಮೆದುಳಿನಲ್ಲಿ ನರವಾಹಕಗಳ ಏರುಪೇರು, ತನ್ನ ಬಗೆಗೆ ಕೀಳರಿಮೆ, ಪತಿ ತನ್ನನ್ನು ಕಡೆಗಣಿಸಬಹುದು, ಇತರರನ್ನು ಇಷ್ಟಪಡಬಹುದು ಎಂಬ ಸಂದೇಹ. ಕೆಲವರಲ್ಲಿ ಇದು ಗಂಭೀರವಾಗಿ 'ಭ್ರಮಾಧೀನ' ಕಾಯಿಲೆಯ ಸ್ವರೂಪವನ್ನೇ ಪಡೆಯಬಹುದು.

ಲೈಂಗಿಕ ಸಮಸ್ಯೆಗಳು ಪತಿ ಪತ್ನಿಯರಲ್ಲಿದ್ದಾಗಲೂ 'ಭ್ರಮಾಧೀನ' ಕಾಯಿಲೆಗೆ ಅದು ದಾರಿಯಾಗಬಹುದು. ತನಗೆ ಸರಿಯಾಗಿ ಲೈಂಗಿಕ ಉದ್ರೇಕವಾಗದಿದ್ದಾಗ, ಪತ್ನಿ/ಪತಿ ಲೈಂಗಿಕ ಕ್ರಿಯೆಗೆ ಆಯಾಸ/ಕುಂದಿದ ಲೈಂಗಿಕ ಶಕ್ತಿಗಳಿಂದ ಸ್ಪಂದಿಸದಿದ್ದಾಗ ಅದು ಜೀವನಸಂಗಾತಿಯಲ್ಲಿ ನನ್ನೊಡನೆ ಲೈಂಗಿಕ ಕ್ರಿಯೆಯಲ್ಲಿ ಸಹಕರಿಸುತ್ತಿಲ್ಲ ಎಂದ ಮೇಲೆ ಇವರು ಮತ್ತ್ಯಾರೊಡನೆಯೋ ಅನೈತಿಕ ಸಂಬಂಧದಲ್ಲಿರಬೇಕು ಎಂಬ ಅನುಮಾನಕ್ಕೆ ಕ್ರಮೇಣ ಭ್ರಮೆಗೆ ಕಾರಣವಾಗಬಹುದು.

ಪತಿ/ಪತ್ನಿಯ ಶೀಲದ ಬಗೆಗಿನ ಭ್ರಮೆ ನಾವು ಆಗಾಗ್ಗೆ ಕಾಣುವಂತಹ ಸಮಸ್ಯೆಯಾದರೆ, ಪ್ರಸಿದ್ಧ ವ್ಯಕ್ತಿಯೊಬ್ಬರು ತನ್ನೊಡನೆ ಪ್ರೇಮದಲ್ಲಿದ್ದಾರೆ ಎಂಬ ಭ್ರಮೆ, ತನ್ನನ್ನು ಯಾರೋ ದ್ವೇಷಿಸುತ್ತಿದ್ದಾರೆ/ ಸಂಚು ಹೂಡುತ್ತಿದ್ದಾರೆ ಎಂಬ ಭ್ರಮೆ, ತನ್ನ ದೇಹದ ಯಾವುದೋ ಒಂದು ಭಾಗ ಸರಿಯಿಲ್ಲ ಎಂಬ ಭ್ರಮೆಗಳು ಪ್ರತ್ಯೇಕ ಭ್ರಮಾಧೀನ ಕಾಯಿಲೆಗಳಾಗಿ ಎದುರು ನಿಲ್ಲಬಹುದು.

### ಕಣ್ಣು ಕಾಣದಾಗ, ಕಿವಿ ಕೇಳದಾಗ ….

ಕೆಲವೊಮ್ಮೆ ವೃದ್ಧಾಪ್ಯದ ಹಂತದಲ್ಲಿ '**sensory deprivation syndrome**' ಎಂಬ ಸಮಸ್ಯೆ ಉಂಟಾಗಲು ಸಾಧ್ಯವಿದೆ. ದೃಷ್ಟಿ ಕುಂದಿದಾಗ ಮೆದುಳು ಅದನ್ನು ಹೊಂದಿಸಲು ತಾನೇ ದೃಷ್ಟಿಯ ಭ್ರಮೆಗಳನ್ನು ಸೃಷ್ಟಿಸಬಹುದು. ಆಗ 'ಅಲ್ಲಿ ಯಾರೋ ಬಂದು ನಿಂತಿದ್ದಾರೆ, ಕರೆಯುತ್ತಿದ್ದಾರೆ, ಮಾತನಾಡುತ್ತಿದ್ದಾರೆ' ಎಂಬ ಭ್ರಮೆಗೆ ಆ ವ್ಯಕ್ತಿ ಒಳಗಾಗಬಹುದು. ಹಾಗೆಯೇ ಕಿವಿ ಕೇಳದಾಗ, 'ಯಾರೋ ಹಾಡಿದಂತೆ, ಮಾತನಾಡಿದಂತೆ' ಭಾಸವಾಗಬಹುದು. ಇದನ್ನು '**hallucinosis**' ಎಂದು ಮನೋವೈದ್ಯಕೀಯ ವಿಜ್ಞಾನ ಗುರುತಿಸುತ್ತದೆ.

ಲೇಖಕಿ ಶಿವಮೊಗ್ಗದಲ್ಲಿ ಮನೋವೈದ್ಯೆ.
**ಸಂಪರ್ಕ: 9845229499**

### ಭ್ರಮೆಗೆ ಚಿಕಿತ್ಸೆ

'ಭ್ರಮೆ' ಎಂಬ ಒಂದೇ ಹೆಸರಿನೆಡೆ ಇವೆಲ್ಲವನ್ನೂ ಸೇರಿಸಿದರೂ, ಸಹಜವಾಗಿ ಉಂಟಾಗುವ, ವ್ಯಕ್ತಿ ತರ್ಕಬದ್ಧವಾಗಿ ಯೋಚಿಸಿ, ತಾನೇ ಹೊರಬರಲು ಸಾಧ್ಯವಾಗುವ `ಭ್ರಮೆ'ಗೆ ಚಿಕಿತ್ಸೆ ಬೇಕಾಗಿಲ್ಲ. ಆದರೆ ಭ್ರಮಾಧೀನ ಕಾಯಿಲೆ, ಚಿತ್ತವಿಕಲತೆಯ ಭ್ರಮೆ, ಇಂದ್ರಿಯಗಳ ನಿಷ್ಕ್ರಿಯತೆಯಿಂದ ಉಂಟಾಗುವ ಭ್ರಮೆಗಳಲ್ಲಿ ಚಿಕಿತ್ಸೆ ಬೇಕು. ಪರಿಣಾಮಕಾರಿಯಾದ ಚಿಕಿತ್ಸೆಯ ಲಭ್ಯತೆಯೂ ಇವುಗಳಿಗಿದೆ. ಔಷಧೀಯ ಚಿಕಿತ್ಸೆಯೊಂದಿಗೆ 'ನೋವಿ'ನ ರೀತಿಯಲ್ಲಿ ವ್ಯಕ್ತಿಯ 'ಭ್ರಮೆ'ಯನ್ನು ಒಂದು ನಿಜ ಲಕ್ಷಣವಾಗಿ ಗುರುತಿಸುವುದು ಅತ್ಯಗತ್ಯ.

ಭ್ರಮಾಧೀನ ಕಾಯಿಲೆಯಲ್ಲಿ ವ್ಯಕ್ತಿಯನ್ನು ಚಿಕಿತ್ಸೆಯಲ್ಲಿ ಹಿಡಿದಿಡುವುದು ದೊಡ್ಡ ಸವಾಲು. ಭ್ರಮೆಯ ಜೊತೆಗೆ ಇರುವ ಖಿನ್ನತೆಯನ್ನು ಸರಿಪಡಿಸುವುದು, ದಂಪತಿಗಳ ಮಧ್ಯೆ ಇರುವ ಅನ್ಯೋನ್ಯತೆಯನ್ನು ಬಲಪಡಿಸುವುದು ಇವು ಮುಖ್ಯವಾದ ಮೆಟ್ಟಿಲುಗಳು. ಕುಟುಂಬದವರಾದರೂ ಅಷ್ಟೆ, 'ರೋಗಿಗೆ ಮಾತ್ರ ಔಷಧಿ ನೀಡಿದರೆ ಸಾಕು' ಎಂಬ ಧೋರಣೆ ಬಿಟ್ಟು, ಸಕ್ರಿಯವಾಗಿ ಉತ್ತಮ ಕೌಟುಂಬಿಕ ಪರಿಸರ ನಿರ್ಮಾಣ ಮಾಡಲು ಶ್ರಮಿಸುವುದು ಅವಶ್ಯ. ಇದರಿಂದ ಸ್ವತಃ ರೋಗಿ ಭ್ರಮೆಯಿಂದ ಹೊರಬರುವುದೂ ಸಾಧ್ಯವಾಗುತ್ತದೆ. ಆತ/ಆಕೆಯ ಭ್ರಮೆಯಿಂದ ಇತರರು ನರಳುವುದೂ ಇಲ್ಲವಾಗುತ್ತದೆ.